ಕೃಷಿ ಸಂರಕ್ಷಣೆ ಯೋಜನೆ

5337 (5927); ಶ್ರೀ ಈಶ್ವರ ಭೀಮಣ್ಣ ಖಂಡ್ರೆ

ಅ) ಭಾಲ್ಕಿ ತಾಲ್ಲೂಕಿನಲ್ಲಿ ಕೃಷಿ ಸಂಸ್ಕರಣೆ ಯೋಜನೆಗೆ ಬಂದಿರುವ ಅರ್ಜಿಗಳೆಷ್ಟು;

ಆ) ಈ ಯೋಜನೆಗೆ ಎಷ್ಟು ಅನುದಾನ ನಿಗದಿಪಡಿಸಲಾಗಿದೆ.

ಇ) ಭಾಲ್ಕಿ ತಾಲ್ಲೂಕಿನಲ್ಲಿ ಹೆಚ್ಚಾಗಿ ಟಾರ್ಪಲೀನ್‌ಗಾಗಿ ಅರ್ಜಿ ಬಂದಿದ್ದು, ಅದನ್ನು ಪೂರೈಸಲು ಹೆಚ್ಚಿನ ಅನುದಾನ ನೀಡಲು ಕ್ರಮ ಜರುಗಿಸಲಾಗುವುದೇ;

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಕೃಷಿ ಸಂಸ್ಕರಣೆ ಯೋಜನೆಯಡಿ ಭಾಲ್ಕಿ ತಾಲ್ಲೂಕಿನಲ್ಲಿ 2015–16ನೇ ಸಾಲಿನಲ್ಲಿ ಈತನಕ ಒಟ್ಟು 2946 ಅರ್ಜಿಗಳು ಟಾರ್ಪಲಿನ್‌ಗಳನ್ನು ಒದಗಿಸುವಂತೆ ಕೋರಿ ಬಂದಿರುತ್ತವೆ.

ಆ) 2015–16ನೇ ಸಾಲಿಗೆ ಜಿಲ್ಲೆಗೆ ಒಟ್ಟು ರೂ. 78.79 ಲಕ್ಷಗಳ ಕಾರ್ಯಕ್ರಮವಿದ್ದು, ಭಾಲ್ಕಿ ತಾಲ್ಲೂಕಿಗೆ ರೂ. 16,18 ಲಕ್ಷಗಳ ಕಾರ್ಯ ಕ್ರಮವನ್ನು ನಿಗಧಿವಡಿಸಲಾಗಿದೆ. ಇದರಲ್ಲಿ ರೂ. 11.13 ಲಕ್ಷಗಳನ್ನು ಟಾರ್ಪಲೀನ್‌ಗಳನ್ನು ಸಹಾಯಧನದಡಿ ಸರಬರಾಜು ಮಾಡಲು ಒದಗಿಸಿಕೊಳ್ಳಲಾಗಿದೆ.

ಇ) 2015–16ನೇ ಸಾಲಿಗೆ 'ಕೃಷಿ' ಉತ್ಪನ್ನಗಳ ಸಂಸ್ಕರಣೆ' ಯೋಜನೆಯಡಿ ಟಾರ್ಪಲಿನ್‌ಗಳಿಗಾಗಿ ಹೆಚ್ಚುವರಿ ಅನುದಾನ ಒದಗಿಸಲು ಎಲ್ಲಾ ಜಿಲ್ಲೆಗಳಿಂದ ಪ್ರಸ್ತಾವನೆಗಳು ಬಂದಿದ್ದು, ಅನುದಾನದ ಲಭ್ಯತೆಗೆ ಅನುಗುಣವಾಗಿ ಕ್ರಮ ಜರುಗಿಸಲಾಗುತ್ತಿದೆ.